<u>ದಿನಾಂಕ: **04-01-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ.ವಿಪಿಸಿ ವಕೀಲರಿಂದಃ</u>

**1.** ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಜನ್ಮ ದಿನಾಂಕ 01-05-1972 ಅಂತಾ ಇರುತ್ತದೆ. ನನಗೆ GPA ಪತ್ರ ಬರೆದುಕೊಟ್ಟಿರುವ ವಿಜಯಾ ರಾವಸಾಹೇಬ ಥಾರಕರ ರವರ ವಯಸ್ಸು 50 ಇರುತ್ತದೆ. 2 ನೇ ವಾದಿಯ ಜನ್ಮ ಆದ ವರುಷ ನಿಪಿ-19 ರ ಪ್ರಕಾರ 1980 ಎಂದರೆ ಸರಿ. 2 ನೇ ವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1980 ರ ಹಿಂದೆ ಆದ ವ್ಯವಹಾರ ಹಾಗೂ ಘಟನಾವಳಿ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ನಾನು ಶಿರಗಾಂವ ಗ್ರಾಮದ ಖಾಯಂ ನಿವಾಸಿ ಎಂದರೆ ಸರಿ. 2 ನೇ ವಾದಿ ಕೊಲ್ಲಾಪೂರ ಜಿಲ್ಲೆ ತಾಲೂಕಾ ಕರವೀರ ನಲ್ಲಿರುವ ಕುಪೇರಿ ಗ್ರಾಮದ ವಾಸಿ. 2 ನೇ ವಾದಿ ಸದರಿ ಗ್ರಾಮದಲ್ಲಿ ಸುಮಾರು 30 ವರುಷಗಳಿಂದ ಅಲ್ಲಿಯೇ ವಾಸವಿರುತ್ತಾರೆ. 2 ನೇ ವಾದಿ ನನ್ನ ತಾಯಿಯ ಅಣ್ಣನ ಮಗಳು. ದಾವಾ ಆಸ್ತಿಗಳು ಯಕ್ಸಂಬಾ ಗ್ರಾಮದವು ಎಂದರೆ ಸರಿ. ಯಕ್ಸಂಬಾ ಗ್ರಾಮದಲ್ಲಿ ಇರುವ ವಾದಿಯ ಮನೆತನಕ್ಕೆ ಸೇರಿದ ಆಸ್ತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಮಾಹಿತಿ ನಿಮಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು " 2 ನೇ ವಾದಿ ನನಗೆ ಸಂಬಂಧಿಕಳಾಗಿದ್ದರಿಂದ ನನಗೆ ಅವರ ಮನೆತನದ ಆಸ್ತಿ ಬಗ್ಗೆ ಮಾಹಿತಿ ಗೊತ್ತಿದೆ " ಎಂದು ನುಡಿಯುತ್ತಾರೆ. ಈ ದಾವೆಯ ವಾದ ಪತ್ರ ತಯಾರಿಸಲು ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ.

**2.** ದಾವಾ ಆಸ್ತಿಯಲ್ಲಿ ತಂಟೆ ಆಸ್ತಿ ಯಾವುದು ಎಂದು ನನಗೆ ಗೊತ್ತು. ಯಕ್ಸಂಬಾ ಸರ್ವೆ ನಂಬರ 384/1 ರಲ್ಲಿ ವಿಸ್ತೀರ್ಣ 15 ಎಕರೆ 13 ಗುಂಟೆ ದಾವಾ ಆಸ್ತಿ ಇರುತ್ತದೆ. ಸದರಿ ಜಮೀನಿನಲ್ಲಿ ಗುರುಪಾದ ತುಕಾರಾಮ ಕಾರಡೆ ರವರಿಗೆ 02 ಎಕರೆ ಸೇರಿರುತ್ತದೆ, ಪುಂಡಲೀಕ ರಾಮಾ ಕಾರಡೆ ರವರಿಗೆ 05 ಎಕರೆ 24 ಗುಂಟೆ ಸೇರಿರುತ್ತದೆ, ಮಾರುತಿ ವಾಳಕೆ 06 ಎಕರೆ, ಉಳಿದ ಜಮೀನು 2 ನೇ ವಾದಿಗೆ ಸೇರಿರುತ್ತದೆ. ಅನೀಲ ದೇವಪ್ಪ ಖೋತ ಎನ್ನುವವರಿಗೆ ಸದರಿ ಜಮೀನಿನಲ್ಲಿ ಮಾಲಿಕತ್ವ ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಅನೀಲ ಖೋತ ರವರು ಅವರ 02 ಎಕರೆಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಮಾಲೀಕರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಉತಾರ ಪತ್ರಿಕೆಯನ್ನು ನಾನು ನೋಡಿದ್ದೇನೆ. ಸರ್ವೆ ನಂಬರ 384 ಜಮೀನಿನ ಎಲ್ಲಾ ಮಾಲೀಕರ ಹೆಸರು ಉತಾರ ಪತ್ರಿಕೆಯಲ್ಲಿ ನಮೂದು ಇರುತ್ತದೆ. ಅವರ ಹೆಸರು ಜಂಟಿಯಾಗಿ ನಮೂದು ಇದೆ ಎಂದರೆ ಸರಿಯಲ್ಲ. ಸದರಿ ಮಾಲೀಕರ ನಡುವೆ ವಾಟ್ನಿ ಆಗಿರುತ್ತದೆ. ಸದರಿ ಸರ್ವೆ ನಂಬರಗೆ 2-3 ಪೂಟ ಹಿಸ್ಸಾ ಆಗಿರುತ್ತವೆ. ದಾವಾ ಆಸ್ತಿ ಪೂಟ ಹಿಸ್ಸಾ 2 ರಲ್ಲಿ ಇರುತ್ತದೆ. ಈ ಎಲ್ಲದರ ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ. ವಾದ ಪತ್ರದಲ್ಲಿ ನಾನು ನೀಡಿದ ಆಸ್ತಿಯ ವಿವರಣೆ ತಪ್ಪು ಇದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್-ಬಿ ನಕ್ಷೆಯಂತೆ ನಾಲ್ಕು ಹಿಸ್ಸೆಗಳನ್ನು ಒಂದೇ ನಂಬರನಲ್ಲಿ ತೋರಿಸಲಾಗಿದೆ ಎಂದರೆ ಸರಿ.

**3.** ಶ್ರೀಪತಿ ಮತ್ತು ಗುರುಪಾದ ರವರು ಖಾಸ ಅಣ್ಣ-ತಮ್ಮಂದಿರು ಎಂದರೆ ಸರಿ. ಶ್ರೀಪತಿ ರವರು ಗುರುಪಾದರವರಿಗೆ 1980 ರಲ್ಲಿ ಸರ್ವೆ ನಂಬರ 384 ರಲ್ಲಿ 02 ಎಕರೆ ಜಮೀನನ್ನು ಗುರುಪಾದ

ರವರಿಗೆ ಪಾಲು ನೀಡಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ಡೈರಿ ನಂ-99/2011 ರಂತೆ ನಮೂದು ಇದೆ ಎಂದರೆ ಸಾಕ್ಷಿ ಅದು ಖೋಟ್ಟಿ ದಾಖಲೆ ಎಂದು ನುಡಿಯುತ್ತಾರೆ. ಸದರಿ ಡೈರಿ 17-05-1980 ರಂದು ಆಗಿರುತ್ತದೆ ಎಂದರೆ ಸರಿ. ಸದರಿ ಗುರುಪಾದರವರಿಗೆ ದಿನಾಂಕ 05-06-1983 ರಲ್ಲಿ ಭೂನ್ಯಾಯಮಂಡಳಿಯ ಆದೇಶ ನಂ-ಕೆಎಲ್‌ಆರ್/ಎಸ್‌ಆರ್/ನಂ-156/457 ರ ಆದೇಶದ ಪ್ರಕಾರ ಸರ್ವೆ ನಂಬರ 384 ರಲ್ಲಿ 02 ಎಕರೆ ಮಂಜೂರಾಗಿರುತ್ತದೆ ಎಂದರೆ ಸರಿ. ನಿಪಿ-1 ರಂತೆ ಶ್ರೀಪತಿ ತುಕಾರಾಮ ಕರಡೆ ಮತ್ತು ಪುಂಡಲೀಕ ತುಕಾರಾಮ ಕರಡೆ ರವರ ಹೆಸರಿನಲ್ಲಿ 05 ಎಕರೆ 08 ಗುಂಟೆ ನಮೂದು ಇದೆ ಎಂದರೆ ಸಾಕ್ಷಿ "ಅದು ತಪ್ಪಾಗಿ ನಮೂದಾಗಿದೆ 05 ಎಕರೆ 24 ಗುಂಟೆ" ಎಂದು ನಮೂದಾಗಬೇಕಾಗಿತ್ತು ಎಂದು ನುಡಿಯುತ್ತಾರೆ.

**4.** ಶ್ರೀಪತಿ ತುಕಾರಾಮ ಕರಡೆ ರವರು ಸರ್ವೆ ನಂಬರ 384/1 ರಲ್ಲಿ 06 ಎಕರೆ ಜಮೀನನ್ನು ಇಂದಿರಾಬಾಯಿ ಶಿಂಗಾಡೆ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಶಿಂಗಾಡೆ ರವರು ಆ ಆಸ್ತಿಯನ್ನು ವಾಳಕೆ ಮತ್ತು ಇತರರಿಗೆ ಮಾರಾಟ ಮಾಡಿದರು ಎಂದರೆ ಸರಿ. ನಂತರ ಡೈರಿ ನಂ-99/2011 ರನ್ನು ರದ್ದು ಮಾಡಬೇಕೆಂದು ವಾದಿಗಳು ಕೇಳಿದ್ದರು ಎಂದರೆ ಸರಿ. ಗ್ರಾಮಲೆಕ್ಕಾಧಿಕಾರಿಗಳು ಸದರಿ ಡೈರಿಯನ್ನು ರದ್ದು ಮಾಡಲಿಲ್ಲ. ಆ ಕಾರಣಕ್ಕೆ ವಾದಿಗಳು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಡೈರಿ ನಂ-99/2011 ರ ವಿರುದ್ಧ ನಾನು ಉಪವಿಭಾಗಾಧಿಕಾರಿಗಳ ರವರಲ್ಲಿ ಮೆಲ್ಮನವಿ ಸಲ್ಲಿಸಿಲ್ಲ. ಮೆಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಶ್ರೀಪತಿ ಕರಡೆರವರು ಮರಣ ಹೊಂದಿ ಸುಮಾರು 10 ವರುಷವಾಗಿರುತ್ತದೆ. ಅವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಹೆಸರನ್ನು ದಾಖಲ ಮಾಡಲು ವರದಿ ಕೊಟ್ಟಿರಲಿಲ್ಲ. ಶ್ರಿಪತಿ ರವರ ಮರಣದ ನಂತರ ವಾದಿಗಳು ವಾರಸಾ ಆಧಾರದ ಮೇಲೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತಮ್ಮ ಹೆಸರನ್ನು ದಾಖಲು ಮಾಡಲು ಅರ್ಜಿ ಕೊಟ್ಟಿರಲಿಲ್ಲ. ಶ್ರೀಪತಿ ರವರು ನೀಡಿದ 02 ಎಕರೆ ಹಾಗೂ ನ್ಯಾಯ ಮಂಡಳಿ ನೀಡಿದ 02 ಎಕರೆ ಜಮೀನುನ್ನು ಸೇರಿ ಒಟ್ಟು 04 ಎಕರೆ ಜಮೀನನ್ನು ಗುರುಪಾದರವರು ಹೊಂದಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರು ಸರ್ವೆ ನಂಬರ 384 ರಲ್ಲಿ ನಮೂದು ಇರುತ್ತದೆ. 1 ನೇ ಪ್ರತಿವಾದಿಯ 01 ಎಕರೆ ಜಮೀನು ಸ್ವಾಧಿನದಲ್ಲಿ ಇರುತ್ತದೆ ಎಂದರೆ ಸರಿ. 2 ನೇ ವಾದಿ ಸರ್ವೆ ನಂಬರ 384 ರಲ್ಲಿ ಯಾವುದೇ ಆಸ್ತಿಯ ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಾಗೂ ಸ್ವಾಧೀನ ಇಲ್ಲದಿದ್ದರೂ ಸಹ ಅವರ ಪರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಯ ಹೆಸರು ಸರ್ವೆ ನಂಬರ 384 ರ ಉತಾರ ಪತ್ರಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ತೊಂದರೆ ಕೊಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).**

ಓ.ಹೆ.ಕೆ.ಸರಿ ಇದೆ.

**(ಅಶೋಕ ಆರ್.ಹೆಚ್.)**
**1** ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.